


International Journal of Kannada Research
www.kannadajournal.com

**ISSN: 2454–5813**
IJKR 2019; 5(1): 225-227
© 2019 IJKR
www.kannadajournal.com
Received: 18-02-2018
Accepted: 21-03-2018

**Soumya Ramakrishna**
Department of Music,
Gulbarga University,
Kalburgi, Karnataka, India

**Correspondence**
**Soumya Ramakrishna**
Department of Music,
Gulbarga University,
Kalburgi, Karnataka, India

# ರಾಷ್ಟ್ರೀಯ ಭಾವೈಕ್ಯತೆಯಲ್ಲಿ ಸಂಗೀತದ ಪಾತ್ರ

**Soumya Ramakrishna**

ಸಾಮಾಜಿಕ ಸಂಘ ಜೀವಿಯಾದ ಮಾನವ ಸಂಗೀತ, ಸಾಹಿತ್ಯ, ಲಲಿತಕಲೆಗಳೊಂದಿಗೆ ಬೆರೆತು ತನ್ನ ಪ್ರೌಢಿಮೆಯನ್ನು ಮೆರೆದಿದ್ದಾನೆ. ಅದರಲ್ಲಿ ಸಂಗೀತವು ಮನುಷ್ಯನ ಬಾಂಧವ್ಯದೊಂದಿಗೆ ಹೊಂದಿಕೊಂಡಿರುವುದರಿಂದ ಸಮಾಜದಲ್ಲಿ ಆತನನ್ನು ಮತ್ತಷ್ಟು ವಿಶೇಷ ಸ್ಥಾನದಲ್ಲಿರಿಸಿದೆ. ಸಮಾಜದ ನಿರ್ದೇಶನಗಳಾದ ವೇದಗಳೂ ಕೂಡ ಸಂಗೀತದ ಮಹತ್ವವನ್ನು ಸ್ವೀಕರಿಸಿ ರಾಷ್ಟ್ರೀಯ ಭಾವೈಕ್ಯತೆಗೆ ಸಹಾಯಕವಾಗಿದೆ. ಅದಕ್ಕಾಗಿಯೇ ವೇದಗಳಲ್ಲಿಯೇ ಋಗ್ವೇದದ ಮಂತ್ರೋಚ್ಚಾರಣೆಗಳನ್ನು ಸ್ವರ ರೂಪದಲ್ಲಿ ತರಲು 'ಸಾಮವೇದ' ಎಂಬ ವೇದವನ್ನೇ ನಿರ್ಮಿಸಿ ಸಂಗೀತದ ಮಹತ್ವವನ್ನು ಎತ್ತಿ ಹಿಡಿಯಲಾಗಿದೆ. ಅಂದರೆ ವಿಭಿನ್ನ ರೀತಿಯ ರಚನೆಗಳನ್ನು ಏಕರೂಪದಲ್ಲಿ ತರಲು ವೇದಗಳಲ್ಲಿ ಸಂಗೀತವೆಂಬ ಸೂತ್ರದಡಿ ಬಂಧಿಸಿರುವಂತೆ ಭಿನ್ನ-ಭಿನ್ನ ಮನೋಭಿಪ್ರಾಯಗಳನ್ನು ಹೊಂದಿರುವ ಮನುಷ್ಯರನ್ನು ಕೂಡ ರಾಷ್ಟ್ರೀಯ ಭಾವೈಕ್ಯತೆಯಡಿಯಲ್ಲಿ ಒಂದುಗೂಡಿಸಲು ಸಾಂಕೇತಿಕವಾಗಿ ಸೂಚಿಸುತ್ತದೆ. ಈ ನಿಟ್ಟಿನಲ್ಲಿ ಅನೇಕ ಸಮಾಜ ಸುಧಾರಕರು ಸಂಗೀತದ ಮೂಲಕ ಸಮಾಜವನ್ನು ಒಗ್ಗೂಡಿಸಲು ಅನೇಕ ರೀತಿಯ ಪ್ರಯೋಗಗಳನ್ನು ಕೂಡ ಮಾಡಿದ್ದಾರೆ. ಕೆಲವೊಂದು ಸಮಯ ಮತ್ತು ಸ್ಥಳಗಳಿಗನುಸಾರವಾಗಿ ಕೀರ್ತನೆ, ಭಾಷಣ, ಗ್ರಂಥ ಪಾಠಗಳು, ಸ್ವರ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಿ ಸಾಮಾಜಿಕ ಏಕತೆಗಾಗಿ ಅನೇಕ ಪ್ರಯತ್ನಗಳನ್ನು ಮಾಡಲಾಗುತ್ತದೆ. ಜೊತೆಗೆ ಇಂದಿಗೂ ಸಂಗೀತವು ಈ ಭೂಮಿಯ ಮೇಲೆ ಸ್ಥಿರವಾಗಿ ನೆಲೆಯೂರಿ ಬಾಂಧವ್ಯದ ಭಾವೈಕ್ಯತೆಯನ್ನು ನಿಭಾಯಿಸುತ್ತಿದೆ. ಏಕೆಂದರೆ ಇದು ಧರ್ಮ, ಜಾತಿ, ಸಂಪ್ರದಾಯ, ಪ್ರಾಂತಗಳ ಬಂಧನದಲ್ಲಿ ಬಂಧಿಸಲ್ಪಟ್ಟಿದೆ. ಹೀಗಾಗಿ ಸಂಗೀತ ಪ್ರಪಂಚವು ಸಾಪೇಕ್ಷವೂ ಹೌದು ನಿರಪೇಕ್ಷವೂ ಹೌದು, ಸಂಗೀತವೂ ಯಾರಿಗೂ ಯಾವ ತೊಂದರೆಯನ್ನು ಕೊಡದೇ ಇಡೀ ಜಗತ್ತನ್ನೇ ಸಂಗೀತವೆಂಬ ಸೂತ್ರದಡಿಯಲ್ಲಿ ಬಂಧಿಸಿ ಭಾವೈಕ್ಯತೆಗೆ ಅನುವು ಮಾಡಿಕೊಟ್ಟಿದೆ.

ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ಭಾರತದಲ್ಲಿ ಅನೇಕ ಧರ್ಮ, ಜಾತಿ, ಪಂಥಗಳನ್ನು ಅನುಸರಿಸುವವರು ಇದ್ದಾರೆ. ಅಂತೆಯೇ ಸರ್ವಧರ್ಮ ಸಮನ್ವತೆಯಡಿಯಲ್ಲಿ ಎಲ್ಲಾ ಧರ್ಮಿಯರು ಸಂಗೀತವನ್ನು ಅನುಸರಿಸುತ್ತಾರೆ. ಕಾರಣವೆಂದರೆ ಸಂಗೀತವು ಸತ್ಯ ಮತ್ತು ಶಾಶ್ವತವಾಗಿದೆ. ಒಂದರ್ಥದಲ್ಲಿ ಸಂಗೀತವೂ ಒಂದು ಧರ್ಮವೇ ಆಗಿದೆ. ಈ ಧರ್ಮದಡಿಯಲ್ಲಿ ಪ್ರತಿಯೊಬ್ಬರೂ ಸಮಾನರೇ ಆಗಿದ್ದಾರೆ. ಹೀಗಾಗಿ ಹಲವಾರು ರೀತಿಯಲ್ಲಿ ಬೇರೆ-ಬೇರೆ ಧರ್ಮಗಳನ್ನು ಅನುಸರಿಸುವವರೂ ಸಂಗೀತವೆಂಬ ಒಂದೇ ಸೂತ್ರವನ್ನು ಅನುಸರಿಸಿ ಭಾವೈಕ್ಯತೆಗೆ ಸಾಕ್ಷಿಯಾಗಿದ್ದಾರೆ.

ಪ್ರಸ್ತುತ ಸಂಗೀತವೆಂದರೇನು?, ಸಂಗೀತದ ಯಾವೆಲ್ಲಾ ರೂಪಗಳು ಪ್ರಚಲಿತದಲ್ಲಿದೆ ಎಂಬುವುದನ್ನು ಸಂಕ್ಷಿಪ್ತ ರೂಪದಲ್ಲಿ ನೋಡುವುದು ಅತ್ಯವಶ್ಯಕವಾಗಿದೆ.

## ಪಾರಿಭಾಷಿಕ ಸಂಗೀತ

ಸಂಗೀತದ ಪ್ರತ್ಯೇಕವಾದ ವಿಧಿ ಮತ್ತು ರೂಪದಲ್ಲಿ ಸ್ವರ, ಲಯ ಮತ್ತು ಭಾವ ಎಂಬ ಮೂರು ತತ್ವಗಳು ದೊರೆಯುತ್ತವೆ ಈ ಮೂರು ತತ್ವಗಳ ಸಮಗ್ರ ಸುಂದರ ರೂಪವೇ ಸಂಗೀತವಾಗಿದೆ ಸಂಗೀತದ ಮೊದಲನೇ ಗುಣವೇ ಮನೋರಂಜನೆಯಾಗಿದೆ. ಹಾಗೂ ಮತ್ತೊಂದು ಗುಣವು ಕಲೆಯನ್ನು ತೋರ್ಪಡಿಸುತ್ತದೆ. ಹೀಗಾಗಿ ಮನೋರಂಜನಾ ಗುಣವು ಮನಸ್ಸನ್ನು ತೃಪ್ತಿಗೊಳಿಸಿದರೆ, ಕಲೆಯು ಬುದ್ಧಿಯನ್ನು ತೀಕ್ಷ್ಣಗೊಳಿಸುತ್ತದೆ. ಹೀಗಾಗಿ ಸಂಗೀತವು ಮನಸ್ಸಿನ ಪ್ರಫುಲ್ಲತೆಯೊಂದಿಗೆ ವಿದ್ಯೆಯ ಆಗರವಾಗಿದೆ.

**ಸಂಗೀತದ ಪ್ರಕಾರಗಳು**

ಸಂಗೀತವನ್ನು ಮುಖ್ಯವಾಗಿ ಎರಡು ಭಾಗಗಳಲ್ಲಿ ವಿಭಜಿಸಬಹುದಾಗಿದೆ. ಶಾಸ್ತ್ರೀಯ ಸಂಗೀತ ಮತ್ತು ಸುಗಮ ಸಂಗೀತ. ಶುದ್ಧವಾದ ಶಾಸ್ತ್ರೀಯ ಸಂಗೀತದಲ್ಲಿ ನಿಯಮಗಳನ್ನು ಪಾಲಿಸುವುದು ಅತ್ಯವಶ್ಯಕವಾಗಿದೆ. ಆದರೆ ಸುಗಮ ಸಂಗೀತಕ್ಕೆ ಶಾಸ್ತ್ರೀಯ ಸಂಗೀತದ ಯಾವುದೇ ನಿರ್ಬಂಧನೆಗಳಿಲ್ಲ ಹೀಗಾಗಿ ಶಾಸ್ತ್ರೀಯ ಸಂಗೀತದ ಈ ಬಂಧನವೇ ಭಾವೈಕ್ಯತೆಗೆ ಹೆಚ್ಚು ಸಹಾಯಕವಾಗಬಲ್ಲುದಾಗಿದೆ. ಅಂದರೆ, ಶಾಸ್ತ್ರೀಯ ಸಂಗೀತದ ಧ್ರುಪದ, ಧಮಾರ, ಖ್ಯಾಲ್,ದಾದರಾ,ಹೀಗೆ ಯಾವುದೇ ಪ್ರಕಾರವಾದರೂ ಯಾವುದೇ ಘರಾಣಾದವರಾದರೂ ಒಂದೇ ರೀತಿಯ ಬಂದೀಶಗಳನ್ನು ಹಾಡುತ್ತಾ, ತಾನು, ಬೋಲ್‌ಗಳನ್ನು ತಮ್ಮಿಷ್ಟದನುಸಾರ ಪ್ರಯೋಗಿಸುತ್ತಾ ಎಲ್ಲಾ ಧರ್ಮದವರೂ ಹಾಡುತ್ತಾರೆ. ಆದರೆ ಸಂಗೀತದಲ್ಲಿ ಪ್ರಾಂತೀಯ ಭೇದ ಮತ್ತು ಭಾಷಾಭೇದಗಳಿವೆ. ಉದಾಹರಣೆಗೆ ಸದಾರಂಗ ಮತ್ತು ಅದಾರಂಗರವರ ಬಂದೀಶಗಳು ಇಡೀ ದೇಶದ ತುಂಬೆಲ್ಲಾ ಪ್ರಚಲಿತದಲ್ಲಿವೆ. ಹಿಂದೂಗಳೇ ಇರಲಿ ಮುಸಲ್ಮಾನರೇ ಇರಲಿ ಎಲ್ಲರೂ ಅವುಗಳನ್ನೇ ಹಾಡುತ್ತಾರೆ. 'ಕರೀಮ ನಾಮ ತೇರೋ' "ಬೌರೆ ಜಿನ ಅಲ್ಲಾ"–ಮಿಯಾಮಲ್ಹಾರ ಮತ್ತು ಬೃಂದಾವನಿ ಸಾರಂಗದ ಬಂದೀಶಗಳನ್ನು ಎಲ್ಲರೂ ಹಾಡುತ್ತಾರೆ.ಧೃಪದ ಮತ್ತು ಧಮಾರನ ಹೆಚ್ಚಿನ ಬಂದೀಶಗಳನ್ನು ರಾಮ ಮತ್ತು ಕೃಷ್ಣನ ಕುರಿತಾಗಿಯೇ ಇವೆ. ಇವುಗಳನ್ನು ಮುಸಲ್ಮಾನರೂ–ಹಿಂದೂಗಳೂ ಎಲ್ಲರೂ ಹಾಡುವುದು ಏಕತೆಗೆ ಸಾಕ್ಷಿಯಾಗಿವೆ.

ಘರಾಣೆಗಳು ತನ್ನದೇ ಆದ ವಿಶಿಷ್ಟತೆಗಳನ್ನು ಹೊಂದಿ ಆರಂಭವಾದುವಾಗಿವೆ. ಘರಾಣೆಗಳ ಪ್ರಾತಿನಿಧ್ಯವು ಹೆಚ್ಚಾಗಿ ಮುಸಲ್ಮಾನ ವ್ಯಕ್ತಿಗಳದ್ದೇ ಆಗಿದೆ. ಗೋಪಾಲನಾಯಕರು ಕಿರಣಾ ಘರಾಣೆಯ ಸಂಸ್ಥಾಪಕರಾಗಿದ್ದಾರೆ.ಹೀಗಾಗಿ ಇತಿಹಾಸ ಸಾಕ್ಷಿಯಾಗಿ ಭಾರತ ದೇಶದಲ್ಲಿ ಸಂಗೀತ ಶಿಕ್ಷಣವು ಹಿಂದೂಗಳಿಂದ ಮುಸಲ್ಮಾನರಿಗೆ, ಮುಸಲ್ಮಾನರಿಂದ ಹಿಂದೂಗಳಿಗೆ ನಡೆಯುತ್ತಾ ಬಂದಿದೆ. ಇದು ವಂಶಪಾರಂಪರ್ಯವಾಗಿ ಹಲವಾರು ವರ್ಷಗಳಿಂದ ನಡೆಯುತ್ತಿದೆ.

ಗಾಯನ, ವಾದನ, ಮತ್ತು ನೃತ್ಯಗಳ ಸಮ್ಮಿಲನವೇ ಸಂಗೀತವಾಗಿದೆ. ಗಾಯನವು ಮುಖ್ಯವಾಗಿ ಪ್ರಸ್ತುತಗೊಳ್ಳಲು ವಾದ್ಯಗಳ ವಾದನವು ಅವಶ್ಯಕವಾಗಿದೆ. ನೃತ್ಯದಲ್ಲಿ ನಾಲ್ಕು ವೇದಗಳ ಸಾಮೂಹಿಕ ಸಾಮಾಗ್ರಿ ದೊರೆಯುತ್ತದೆ. ಸಾಮವೇದದ ಗಾಯನ, ಋಗ್ವೇದದ ಶಬ್ದ, ಯಜುರ್ವೇದದ ಭಂಗಿ ಮತ್ತು ಅಥರ್ವವೇದದ ರಸವನ್ನು ಒಳಗೊಂಡಿದೆ. ಇಲ್ಲಿ ಅವನದ್ಧ ವಾದ್ಯಗಳಾದ ತಬಲಾ, ಮೃದಂಗ, ಡೋಲಕ, ಮೊದಲಾದವುಗಳ ವಿಶೇಷತೆಯು ಮಹತ್ವವಾಗಿದೆ. ಇದು ವಾದ್ಯ ಸಂಗೀತದ ಸಮಯ ಪರಿಪಾಲನೆಯ ಮಹತ್ವವನ್ನು ಸಾರುತ್ತದೆ. ದೇಶದ ಯಾವುದೇ ಪ್ರಚಲಿತ ಸಂಗೀತದ ವಿಧವಾದರೂ, ಶೈಲಿಯಾದರೂ ಇದಕ್ಕೆ ತಾಳದ ಅವಶ್ಯಕತೆ ಇದೆ. ಹೀಗಾಗಿ ಎಲ್ಲಾ ಪ್ರಚಲಿತ ತಾಳಗಳು ಭಾರತೀಯ ಸಂಗೀತದಲ್ಲಿ ಸಮಯ ಪಾಲನೆಗೆ ಸಹಾಯಕವಾಗಿ ಸೌಂದರ್ಯಸೃಷ್ಟಿಯ ದ್ಯೋತಕವಾಗಿದೆ. ಇದು ಕೂಡ ಏಕತೆಯನ್ನು ಸಾರುತ್ತದೆ. ಭಾರತ ದೇಶದ ಸಂಗೀತದ ಮಹತ್ವವೆಂದರೆ ಭಾರತದಲ್ಲಿ ಎರಡು ಪದ್ಧತಿಗಳು ಪ್ರಚಲಿತದಲ್ಲಿವೆ (೧)ಉತ್ತರಾದಿ ಸಂಗೀತ ಪದ್ಧತಿ (೨) ದಕ್ಷಿಣಾದಿ ಸಂಗೀತ ಪದ್ಧತಿ. ದಕ್ಷಿಣಾದಿ ಸಂಗೀತ ಪದ್ಧತಿಯು ಮೈಸೂರು, ಆಂಧ್ರಪ್ರದೇಶ ಮತ್ತು ಮದ್ರಾಸಗಳಲ್ಲಿ ಹೆಚ್ಚು ಪ್ರಚಲಿತದಲ್ಲಿವೆ. ಇದನ್ನು ಕರ್ನಾಟಕಿ ಸಂಗೀತ ಪದ್ಧತಿ ಎಂತಲೂ ಕರೆಯುತ್ತಾರೆ. ಉತ್ತರಾದಿ ಅಥವಾ ಹಿಂದೂಸ್ಥಾನಿ ಪದ್ಧತಿಯು ಇಡೀ ಭಾರತದ ತುಂಬೆಲ್ಲಾ ಪ್ರಚಲಿತದಲ್ಲಿದೆ. ೧೩ನೇ ಶತಮಾನದಲ್ಲಿ ಎರಡೂ ಪದ್ಧತಿಗಳ ಆಧಾರ ಗ್ರಂಥವೂ ಒಂದೇ ಆಗಿರುವುದರಿಂದ ಪ್ರಾಯೋಗಿಕ ಸಂಗೀತವೂ ಒಂದೇ ಆಗಿತ್ತು ಉತ್ತರಭಾರತದಲ್ಲಿ ಮುಸಲ್ಮಾನರ ಆಗಮನವಾದ್ದರಿಂದ ವಿದೇಶಿ ಸಂಗೀತದ ಪ್ರಭಾವ ಬೀರಿತು. ಆದ್ದರಿಂದ ದಕ್ಷಿಣಾದಿ ಸಂಗೀತವು ಭಿನ್ನವಾಗಿದೆ ಮತ್ತು ಇದಕ್ಕೆ ಭಾಷಾ–ಭೇದವು ಕಾರಣವಾಗಿದೆ.

ಮಧ್ಯ ಕಾಲದಲ್ಲಿ ಉತ್ತರಾದಿ ಸಂಗೀತದ ರಾಗ–ವರ್ಗಿಕರಣ ಪದ್ಧತಿ ಇದೆ. ಹಾಗೆಯೇ ದಕ್ಷಿಣಾದಿ ಪದ್ಧತಿಯಲ್ಲಿ ಮೇಲ ಪದ್ಧತಿ ಪ್ರಚಲಿತದಲ್ಲಿದೆ. ಮಧ್ಯಕಾಲದಲ್ಲಿ ೧೯ನೇ ಶತಮಾನದವರೆಗೆ ವರ್ಗಿಕರಣದಲ್ಲಿ ಬಹಳಷ್ಟು ಭಿನ್ನಮತಗಳಿದ್ದವು. ಪ್ರಸ್ತುತ ಈ ರೀತಿಯಾಗಿಲ್ಲ. ೨೦ನೇ ಶತಮಾನದಲ್ಲಿ ಉತ್ತರಾದಿ ಮತ್ತು ದಕ್ಷಿಣಾದಿ ಎರಡೂ ಪದ್ಧತಿಗಳು ಹತ್ತಿರವಾಗಿವೆ. ಮತ್ತು ಎರಡು ಪದ್ಧತಿಗಳ ಮೂಲ ಸಿದ್ಧಾಂತ ಒಂದೇ ಆಗುತ್ತಾ ಏಕತೆಯೆಡೆಗೆ ಸಾಗುತ್ತಿವೆ. ಇದರ ಶ್ರೇಯಸ್ಸು ಶ್ರೀ ಭಾತ್ಖಂಡೆಯವರದ್ದಾಗಿದೆ. ಏಕೆಂದರೆ ದಕ್ಷಿಣಾದಿ ಸಂಗೀತದ ವಿದ್ವಾನರಾದ ಪಂಡಿತ ವೆಂಕಟಮುಖಿಯವರ ೭೨ ಮೇಲಗಳನ್ನು ೧೦ ಮೇಲಗಳನ್ನಾಗಿಸಿ ಮತ್ತು ಪ್ರಚಲಿತ ರಾಗಗಳ ವರ್ಗಿಕರಣವನ್ನು ೧೦ ಥಾಟ್‌ಗಳನ್ನಾಗಿಸಿದ್ದಾರೆ. ಮೇಲ ಮತ್ತು ಥಾಟ್‌ಗಳೆರಡೂ ಪರ್ಯಾಯವಾಚಕಗಳಾಗಿವೆ. ಇದರ ಪ್ರಕಾರ ದಕ್ಷಿಣಾದಿ ಮತ್ತು ಉತ್ತರಾದಿಗಳನ್ನು ಹೊಂದಿಸುವುದು ಸುಲಭದ ಮಾತಲ್ಲ. ಇದರ ಪರಿಣಾಮವಾಗಿ ಪ್ರಸ್ತುತ ಎರಡರಲ್ಲಿಯೂ ಹೆಚ್ಚು ಸಾಮ್ಯತೆಗಳು ಕಂಡು ಬರುತ್ತವೆ. ಯಾವುದೇ ರಾಗ ಉತ್ತರಾದಿಯಲ್ಲಿ ಪ್ರಚಲಿತದಲ್ಲಿದ್ದರೆ, ಅದು ದಕ್ಷಿಣಾದಿಯಲ್ಲೂ ಅಷ್ಟೇ ಪ್ರಚಲಿತವನ್ನು ಕಂಡಿದೆ. ಉತ್ತರಾದಿಯ ಮಾಲಕಂಸ ರಾಗವು ದಕ್ಷಿಣಾದಿಯ ಹಿಂಡೋಲ ರಾಗವಾಗಿದೆ. ಇದು ಕೇವಲ ಹೆಸರಿನ ಬದಲಿಯಾಗಿದೆ. ಆದರೆ ರಾಗದ ಸ್ವರಗಳು ಒಂದೇ ಆಗಿವೆ. ಹೀಗೆ ಕರ್ನಾಟಕ ಪದ್ಧತಿಯ ಇಂತಹ ಅನೇಕ ರಾಗಗಳು ಉತ್ತರಾದಿಯಲ್ಲಿ, ಉತ್ತರಾದಿ ಪದ್ಧತಿಯ ಅನೇಕ ರಾಗಗಳು ದಕ್ಷಿಣಾದಿಯಲ್ಲಿ ಅನೇಕ ಪಂಡಿತರು ಪ್ರಸ್ತುತಪಡಿಸುತ್ತಾರೆ.

ಹಲವಾರು ಸಂಗೀತಗಾರರು ಉತ್ತರಾದಿ ಸಂಗೀತವನ್ನು ಹಾಡುತ್ತಾರೆ ಮತ್ತು ನುಡಿಸುತ್ತಾರೆ ದಕ್ಷಿಣಾದಿ ಸಂಗೀತದ ಪಂಡಿತರಾದ ವಿದುಷಿ ಎನ್, ರಾಜಮ್‌ರವರು ವಾಯೋಲಿನ ವಾದನದಲ್ಲಿ ಉತ್ತರಾದಿ ಮತ್ತು ದಕ್ಷಿಣಾದಿ ಎರಡು ಶೈಲಿಯಲ್ಲಿ ನುಡಿಸುವ ಪರಿಣಿತಿಯನ್ನು ಹೊಂದಿದ್ದಾರೆ.ಇವರು ಎರಡು ಶೈಲಿಯ ಕಠಿಣ ಪದ್ಧತಿಯನ್ನು ವಾಯೋಲಿನ್ ವಾದನದಲ್ಲಿ ಕರಗತ ಮಾಡಿಕೊಂಡಿದ್ದಾರೆ. ಉತ್ತರಾದಿ ಮತ್ತು ದಕ್ಷಿಣಾದಿ ಸಂಗೀತಗಳೆರಡರಲ್ಲಿಯೂ ಅಧಿಕ ಸಾಮ್ಯತೆ ಇರುವುದರಿಂದ ಪ್ರಸ್ತುತ ಭಾರತದ ಉತ್ತರ ಭಾಗದಲ್ಲಿ ಕರ್ನಾಟಕ ಸಂಗೀತ ಹಾಗೂ ದಕ್ಷಿಣ ಭಾಗದಲ್ಲಿ ಉತ್ತರಾದಿ ಸಂಗೀತ ಶಿಕ್ಷಣ ನಡೆಯುತ್ತಿದೆ.

ಗಾಯನದ ಎರಡೂ ಶೈಲಿಗಳಲ್ಲಿ ವಿಭಿನ್ನತೆ ಇದ್ದರೂ ವಿದೇಶಿಯರೊಬ್ಬರು ದಕ್ಷಿಣಾದಿ ಸಂಗೀತವನ್ನು ಆಲಿಸಿದಾಗ ಇದು ಭಾರತದ ಸಂಗೀತವೆಂದೇ ಹೇಳುತ್ತಾರೆ. ಕಾರಣವೆಂದರೆ ಏಳು ಸ್ವರಗಳ ಹೆಸರುಗಳು ಉತ್ತರಾದಿ ಸಂಗೀತದಂತೆ ಇವೆ. ಹೀಗಾಗಿ ಇದರ ಮೂಲಕ ದೇಶದ ಏಕತೆಯನ್ನು ಸಾದರಪಡಿಸಬಹುದು. ಹೀಗೆ ಸಂಗೀತವು ದೇಶದ ಅನೇಕತೆಯಲ್ಲಿ ಏಕತೆಯನ್ನು ಸಾರುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ.

ಸಂಗೀತದ ಹಲವಾರು ವಿಭಿನ್ನ ಘರಾಣೆಗಳೂ ಕೂಡ ಭಾರತದಲ್ಲಿವೆ. ಆ ಘರಾಣೆಗಳ ಮೂಲಕ ವಂಶ ಪರಂಪರೆಯಾಗಿ ಸಂಗೀತ ಶಿಕ್ಷಣವು ನಡೆಯುತ್ತಾ ಬಂದಿದೆ. ಹೀಗಾಗಿ ಪ್ರತಿಯೊಂದು ಘರಾಣೆಯು ತನ್ನದೇ ಆದ ವಿಭಿನ್ನವಾದ ವಿಶೇಷತೆಯನ್ನು ಹೊಂದಿದೆ. ಆದರೆ ಕಾರ್ಯಕ್ರಮ ಪ್ರಸ್ತುತಪಡಿಸುತ್ತಿರುವಾಗ ಏನೇ ವಿಶೇಷತೆ ಇದ್ದರೂ ರಾಗ,ತಾಳಗಳ ಹೆಸರು ಒಂದೇ ಆಗಿರುತ್ತದೆ ಭೂಪ ರಾಗವನ್ನು ಎಲ್ಲಾ ಘರಾಣೆಯಲ್ಲಿಯೂ ಭೂಪ ರಾಗ ಎಂದೇ ಕರೆಯಲಾಗುತ್ತದೆ. ಏಕೆಂದರೆ, ಶಾಸ್ತ್ರೀಯ ಸಂಗೀತದಲ್ಲಿ

ಪ್ರತಿಯೊಂದು ರಾಗವು ತನ್ನದೇ ಆದ ನಿಯಮವನ್ನು ಹೊಂದಿದೆ.ಪ್ರತಿಯೊಬ್ಬರು ಆ ನಿಯಮವನ್ನು ಪಾಲಿಸಿಯೇ ಆ ರಾಗವನ್ನು ಪ್ರಸ್ತುತಪಡಿಸಬೇಕು. ಉದಾಹರಣೆಗೆ ಯಾವುದೇ ಘರಾಣೆಯವರು ಭೂಪ ರಾಗವನ್ನು ಹಾಡುತ್ತಿರಬೇಕಾದರೆ, 'ಧ' ಮತ್ತು 'ಪ'ಸ್ವರದ ಮೇಲೆ ನ್ಯಾಸ ಮಾಡಿದರೆ ಅದು ದೇಸಕಾರ ರಾಗವಾಗುತ್ತದೆ. ಹೀಗಾಗಿ ಯಾವುದೇ ಪ್ರಾಂತದ ಯಾವುದೇ ಘರಾಣೆಯವರಾದರೂ ಯಾವುದೇ ರಾಗವಾದರೂ ಆ ರಾಗದ ನಿಯಮಗಳಿಗನುಸಾರವಾಗಿ ಆ ರಾಗವನ್ನು ಪ್ರಸ್ತುತಪಡಿಸಬೇಕಾಗುತ್ತದೆ. ಇದೇ ತತ್ವವನ್ನು ನಾವು ಚಿತ್ರಗಾರನ ಚಿತ್ರಕಲೆಯಲ್ಲಿಯೂ ನೋಡಬಹುದಗಿದೆ. ಯಾವ ಪ್ರಾಂತದ ಚಿತ್ರಕಾರನೇ ಇರಲಿ, ಯಾವ ಶೈಲಿಯ ಚಿತ್ರಗಾರನೇ ಆಗಿರಲಿ ಯಾವ ವಿಶೇಷ ಚಿತ್ರವನ್ನು ಬಿಡಿಸುತ್ತಿದ್ದರೂ ಬಿಡಿಸುತ್ತಿರುವ ವ್ಯಕ್ತಿ ಬೇರೆ–ಬೇರೆಯಾಗಿದ್ದರೂ ಚಿತ್ರದ ವಿಶೇಷಣ ಒಂದೇ ಆಗಿರುತ್ತದೆ. ಅಂತೆಯೇ ಮದ್ರಾಸ್, ಉತ್ತರಪ್ರದೇಶ ಹಾಗೂ ಪಂಜಾಬ್ ಹೀಗೆ ಮೂರು ಪ್ರಾಂತದ ಚಿತ್ರಕಾರರು ರಾಮ ಮತ್ತು ಕೃಷ್ಣ ದೇವರುಗಳ ಚಿತ್ರವನ್ನು ಬಿಡಿಸಿದಾಗ ಅದು ಪ್ರಾಂತೀಯ ಭೇದ ಮತ್ತು ವ್ಯಕ್ತಿ ಭೇದವಾಗಿರುತ್ತದೆಯೇ ವಿನಃ ಚಿತ್ರ ಭೇದವಾಗಿರುವುದಿಲ್ಲ. ಇದನ್ನೇ ಏಕತೆ ಎಂದು ಕರೆಯಲಾಗುತ್ತದೆ.

ಸಂಗೀತದಲ್ಲಿ ಸಮಯದ ಪರಿಕಲ್ಪನೆಯನ್ನು ತಾಳದ ಮೂಲಕ ಸಾದರಪಡಿಸಲಾಗುತ್ತದೆ. ಮೈಸೂರು, ಆಂಧ್ರಪ್ರದೇಶ ಮತ್ತು ಮದ್ರಾಸನ್ನು ಹೊರತುಪಡಿಸಿ ಇಡೀ ಭಾರತದ ತುಂಬೆಲ್ಲಾ ಎಲ್ಲಾ ಪ್ರಚಲಿತ ತಾಳಗಳು ಪ್ರತಿಯೊಂದು ಘರಾಣೆಯಲ್ಲಿ ಮತ್ತು ಪ್ರತಿಯೊಂದು ಪ್ರಾಂತದಲ್ಲಿ ಪ್ರಚಲಿತದಲ್ಲಿವೆ. ತೀನ್‌ತಾಲ್, ಝಪ್ತಾಲ್, ಏಕ್‌ತಾಲ್ ಮೊದಲಾದ ತಾಳಗಳನ್ನು ಪ್ರತಿ ಪ್ರಾಂತದಲ್ಲೂ, ಪ್ರತಿ ಘರಾಣೆಯಲ್ಲೂ ಪ್ರಯೋಗಿಸಲಾಗುತ್ತದೆ. ತಾಳ ಪಂಜಾಬಿ ಮತ್ತು ತ್ರಿತಾಲ್‌ಗಳನ್ನು ಕರ್ನಾಟಕವನ್ನಷ್ಟೇ ಅಲ್ಲದೇ ಇಡೀ ಭಾರತದ ತುಂಬೆಲ್ಲಾ ಪ್ರಯೋಗಿಸಲಾಗುತ್ತದೆ.

ಉತ್ತರ ಭಾರತದಲ್ಲಿ ತಬಲಾ ಮತ್ತು ಪಖವಾಜ್‌ನ ಹಲವು ಘರಾಣೆಗಳು ಪ್ರಚಲಿತದಲ್ಲಿವೆ. ಪ್ರತಿಯೊಂದು ಘರಾಣೆಯಲ್ಲಿಯೂ ಸಾಥ ಸಂಗತದೊಂದಿಗೆ ಸೋಲೋ ವಾದನಗಳೂ ಕೂಡ ನಡೆಯುತ್ತವೆ. ಹಾಗೂ ಪ್ರತಿಯೊಂದು ಘರಾಣೆಗಳು ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ವಸ್ತುಗಳಲ್ಲಿ ಭಿನ್ನತೆಯಿದ್ದರೂ ಪ್ರತಿಯೊಂದು ತಾಳದ ಪ್ರಸ್ತುತ ಕರಣವು ಇಡೀ ದೇಶದ ತುಂಬೆಲ್ಲಾ ಒಂದೇ ಆಗಿದೆ. ಅಂತೆಯೇ ತಬಲಾದಲ್ಲಿ ತೀನ್‌ತಾಲ್‌ನ್ನು ಪ್ರತಿಯೊಂದು ಘರಾಣೆಯವರು ಪ್ರಸ್ತುತಪಡಿಸುತಾರೆ. ಠೇಕಾ, ಉಠಾನ, ಪೇಶಕಾರ, ಕಾಯದಾ, ರೇಲಾ, ಗತ್, ಪರನ, ಟುಕಡೆ ಮೊದಲಾದ ವಿಶೇಷತೆಗಳನ್ನು ಅವಶ್ಯಕತೆಗನುಗುಣವಾಗಿ, ನಿಯಮಕ್ಕನುಸಾರವಾಗಿ ಎಲ್ಲಾ ಘರಾಣೆಯವರು ಪ್ರಸ್ತುತಪಡಿಸುತ್ತಾರೆ. ಶಾಸ್ತ್ರೀಯ ಸಂಗೀತವಾದ್ದರಿಂದ ತಬಲಾ ವಾದನವೂ ಕೂಡ ತನ್ನದೇ ಆದ ನಿಯಮವನ್ನು ಹೊಂದಿದೆ. ಪೇಶಕಾರ ಇರಲಿ, ಕಾಯದಾ, ಗತ್, ಪರನ್ ಯಾವುದೇ ಇರಲಿ ಎಲ್ಲವೂ ವಿಭಿನ್ನವಾಗಿ ತನ್ನದೇ ಆದ ಸ್ವರೂಪವನ್ನು ಒಳಗೊಂಡಿವೆ. ಆದ್ದರಿಂದ ಪ್ರತಿಯೊಂದು ಘರಾಣೆಯು ನಿಯಮವನ್ನು ಪಾಲನೆ ಮಾಡುತ್ತವೆ. ಅಂದರೆ ಒಬ್ಬ ತಬಲಾ ವಾದಕ ಪೇಶಕಾರನ್ನು ಪ್ರಸ್ತುತಪಡಿಸುತ್ತಿರಬೇಕಾದರೆ, ಆತ ಪೇಶಕಾರನ ನಿಯಮವನ್ನು ಪಾಲನೆ ಮಾಡಲೇಬೇಕಾಗುತ್ತದೆ. ಅಂದಾಗ ಭಾರತದ ಯಾವುದೇ ತಬಲಾ ವಾದಕರು ಅದನ್ನು ಪೇಶಕಾರ ಎಂದು ಗುರುತಿಸಬಹುದು. ಹೀಗೆ ಭಿನ್ನತೆಯಲ್ಲಿ ಏಕತೆಯ ದರ್ಶನವಾಗುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಸಂಗೀತದ ಪ್ರತಿಯೊಂದು ರೂಪತೆಯಲ್ಲಿ ದೇಶದ ಏಕತೆಯು ಅಡಗಿದೆ. ಶಾಸ್ತ್ರೀಯ ಸಂಗೀತದ ನಿಯಮ ಪಾಲನೆಯು ದೇಶದ ಪ್ರತಿಯೊಬ್ಬರನ್ನು ಸಂಗೀತಗಾರನನ್ನಾಗಿಸುತ್ತದೆ. ಇದು ಶಾಸನಬದ್ಧವಾಗಿದೆ ಮತ್ತು ಸಕ್ಷಮವಾಗಿದೆ. ಭಾರತಕ್ಕೆ ಮುಸಲ್ಮಾನರ ಆಗಮನವು ಸಂಗೀತದ ಮೇಲೆ ಪ್ರಭಾವ ಬೀರಿತು. ವಿದೇಶಿ ಸಂಗೀತವು ಹಿಂದೂಸ್ಥಾನಿ ಸಂಗೀತದೊಂದಿಗೆ ಬೆರೆತು ಸಂಗೀತದ ಸಾಂಪ್ರದಾಯಕತೆಯನ್ನು ಉಳಿಸಿಕೊಂಡು ಏಕತೆಯನ್ನು ಸಾರಿತು. ತಬಲಾ ಮತ್ತು ತಾಳಗಳು ಮತ್ತು ರಾಗಗಳ ಸೃಷ್ಠಿಕರ್ತರು ಅಮೀರ್ ಖುಸ್ರೋ ಆಗಿದ್ದಾರೆ. ದೇಶದ ಏಕತೆಯಲ್ಲಿ ತಬಲಾದ ಪಾತ್ರವೂ ಬಹುಮುಖ್ಯವಾಗಿದೆ. ಇದು ಸಂಗೀತದ ಪ್ರತಿ ವಿದ್ಯೆ ಮತ್ತು ಪ್ರತಿ ರೂಪದಲ್ಲಿಯೂ ತಾಳ ಬಂಧನದಲ್ಲಿ ಬಂಧಿಸಿ ತನ್ನದೇ ಸ್ವರೂಪವನ್ನು ತೋರಿಸುತ್ತದೆ. ಹೀಗೆ ಸಂಗೀತ ಪ್ರೇಮಿಗಳು ಸ್ವರ ಮತ್ತು ಲಯದ ನಡುವೆ ಐಕ್ಯತೆಯನ್ನು ಸಾರುತ್ತಾರೆ.

**ಆಧಾರ**


೧. "ಸಂಗೀತ"ಹಿಂದಿ ಮಾಸಪತ್ರಿಕೆ. ಬಿ.ಕೆ. ಮಾಹೇಶ್ವರಿ ಪ್ರಕಾಶನ;– ಹಾಥರಸ ಪ್ರಕಾಶನ

2. "ಸಂಗೀತ ಸಂಜೀವಿನಿ". ಪ್ರೊ॥ ರಾಜೀವ ಹಿರೇಮಠ.